# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **45 (276)** |
| **ಸದಸ್ಯರ ಹೆಸರು** | : | **ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : | **06.07.2023** |
| **ಉತ್ತರಿಸುವವರು** | : | **ಮಾನ್ಯ ಮುಖ್ಯ ಮಂತ್ರಿಗಳು** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ವ್ಯಾಪ್ತಿಗೆ ಒಳಪಡುವ ಒಟ್ಟು ಇಲಾಖೆಗಳ ಸಂಖ್ಯೆ ಎಷ್ಟು; ಸದರಿ ಇಲಾಖೆಗಳಲ್ಲಿ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; (ವೃಂದವಾರು ದರ್ಜೆವಾರು ವಿವರ ನೀಡುವುದು) ಇವುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ಇಲಾಖೆವಾರು ಅಂಕಿ ಅಂಶಗಳ ಸಂಪೂರ್ಣ ಮಾಹಿತಿ ಒದಗಿಸುವುದು) | ರಾಜ್ಯ ಸರ್ಕಾರದಲ್ಲಿ ಒಟ್ಟು 43 ವಿವಿಧ ಇಲಾಖೆಗಳಿವೆ. 'ಎ' ವೃಂದದಿಂದ 'ಡಿ' ವೃಂದದವರೆಗಿನ ಒಟ್ಟು ಮಂಜೂರಾದ, ಹಾಗೂ ಖಾಲಿ ಇರುವ ಹುದ್ದೆಗಳ ಇಲಾಖಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಶೇಕಡ 50 ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇರುವುದರಿಂದ, ಸಾರ್ವಜನಿಕರು ನಿತ್ಯವೂ ಸರ್ಕಾರಿ ಕಚೇರಿಗೆ ಅಲೆಯುತ್ತಿರುವುದು ಮತ್ತು ಸರ್ಕಾರಿ ಕೆಲಸ ನಿಗಧಿಯಂತೆ ಸಕಾಲಕ್ಕೆ ಪೂರ್ಣಗೊಳ್ಳುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ; | ರಾಜ್ಯದಾದ್ಯಂತ ವಿವಿಧ ಇಲಾಖೆಗಳಲ್ಲಿ ಮಂಜೂರಾದ ಹುದ್ದೆಗಳ ಪೈಕಿ ಶೇ. 33 ರಷ್ಟು ಹುದ್ದೆಗಳು ಖಾಲಿ ಇದೆ. ಆದಾಗ್ಯೂ, ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಖಾಲಿಯಿರುವ ಹುದ್ದೆಗಳಲ್ಲಿ ಹೆಚ್ಚುವರಿ ಪ್ರಭಾರದಲ್ಲಿರಿಸಿ ದೈನಂದಿನ ಕೆಲಸ-ಕಾರ್ಯಗಳನ್ನು ನಿರ್ವಹಿಸಲು ವ್ಯವಸ್ಥೆ ಮಾಡಲಾಗಿರುತ್ತದೆ. ಇದರಿಂದಾಗಿ ಸಾರ್ವಜನಿಕರ ಕೆಲಸ-ಕಾರ್ಯಗಳು ವಿಳಂಬವಾಗುತ್ತಿರುವುದಿಲ್ಲ. |
| ಇ) | ಹಾಗಿದ್ದಲ್ಲಿ, ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವವರೆವಿಗೂ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ಆಡಳಿತ ಯಂತ್ರವನ್ನು ಚುರುಕುಗೊಳಿಸುವ ಕಡೆ ಸರ್ಕಾರ ನಿರ್ಧಾರ ತೆಗೆದುಕೊಳ್ಳುವುದೇ? (ವಿವರ ನೀಡುವುದು) | ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರು, ಬೆರಳಚ್ಚುಗಾರರು ಮತ್ತು ವಾಹನ ಚಾಲಕರು ಹಾಗೂ ಗ್ರೂಪ್-ಡಿ ವೃಂದದಲ್ಲಿನ ಖಾಲಿ ಹುದ್ದೆಗಳಿಗೆದುರಾಗಿ ಹೊರಗುತ್ತಿಗೆ ಆಧಾರದ ಮೇರೆಗೆ 75,474 ಹುದ್ದೆಗಳಲ್ಲಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. |

**ಕಡತ ಸಂಖ್ಯೆ: ಸಿಆಸುಇ 99 ರಾಸ 2023**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಅನುಬಂಧ

| 2023-24ನೇ ಸಾಲಿನ ಇಲಾಖಾವಾರು ಮಂಜೂರಾದ, ಭರ್ತಿಯಾದ ಹಾಗೂ ಖಾಲಿಯಿರುವ ಹುದ್ದೆಗಳ ವಿವರ | | | | |
|---|---|---|---|---|
| ಕ್ರ.ಸಂ. | ಇಲಾಖೆಗಳು | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿ ಹುದ್ದೆಗಳು |
| 1 | ಕೃಷಿ | 10325 | 3769 | 6556 |
| 2 | ಪಶು ಸಂಗೋಪನೆ | 18553 | 8160 | 10393 |
| 3 | ಹಿಂದುಳಿದ ವರ್ಗಗಳ ಕಲ್ಯಾಣ | 12269 | 7153 | 5116 |
| 4 | ಸಹಕಾರ | 7196 | 2399 | 4797 |
| 5 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 11022 | 5088 | 5934 |
| 6 | ಇ-ಆಡಳಿತ | 77 | 5 | 72 |
| 7 | ಪರಿಸರ ಮತ್ತು ಜೀವಿಶಾಸ್ತ್ರ | 12 | 7 | 5 |
| 8 | ಇಂಧನ | 452 | 209 | 243 |
| 9 | ಆರ್ಥಿಕ | 18945 | 9865 | 9080 |
| 10 | ಮೀನುಗಾರಿಕೆ | 1401 | 613 | 788 |
| 11 | ಆಹಾರ ಮತ್ತು ನಾಗರೀಕ ಸರಬರಾಜು | 2582 | 1264 | 1318 |
| 12 | ಅರಣ್ಯ | 14766 | 8551 | 6215 |
| 13 | ಕೈಮಗ್ಗ ಮತ್ತು ಜವಳಿ | 82 | 41 | 41 |
| 14 | ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ | 74799 | 39603 | 35196 |
| 15 | ಉನ್ನತ ಶಿಕ್ಷಣ | 24792 | 11779 | 13013 |
| 16 | ಒಳಾಡಳಿತ | 127481 | 105412 | 22069 |
| 17 | ತೋಟಗಾರಿಕೆ | 6196 | 3270 | 2926 |
| 18 | ವಾರ್ತೆ | 564 | 255 | 309 |
| 19 | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 75 | 15 | 60 |
| 20 | ಕನ್ನಡ ಮತ್ತು ಸಂಸ್ಕೃತಿ | 596 | 165 | 431 |
| 21 | ಕಾರ್ಮಿಕ | 4352 | 1844 | 2508 |
| 22 | ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | 26908 | 18750 | 8158 |
| 23 | ಭಾರಿ ನೀರಾವರಿ | 1412 | 870 | 542 |
| 24 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 602 | 242 | 360 |
| 25 | ಗಣಿ | 1155 | 476 | 679 |
| 26 | ಸಣ್ಣ ನೀರಾವರಿ | 2414 | 1260 | 1154 |
| 27 | ಅಲ್ಪಸಂಖ್ಯಾತರ ಕಲ್ಯಾಣ | 5719 | 2031 | 3688 |
| 28 | ಸಂಸದೀಯ ವ್ಯವಹಾರಗಳು | 1634 | 1129 | 505 |
| 29 | ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | 1662 | 745 | 917 |
| 30 | ಲೋಕೋಪಯೋಗಿ | 6798 | 4542 | 2256 |
| 31 | ಕಂದಾಯ | 32497 | 21510 | 10987 |
| 32 | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ | 28198 | 17252 | 10946 |

| | | | | |
|---|---|---|---|---|
| 33 | ಪರಿಶಿಷ್ಟ ಜಾತಿಗಳ ಕಲ್ಯಾಣ | 15417 | 5521 | 9896 |
| 34 | ಪರಿಶಿಷ್ಟ ಪಂಗಡಗಳ ಕಲ್ಯಾಣ | 2862 | 497 | 2365 |
| 35 | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | 284068 | 221923 | 62145 |
| 36 | ರೇಷ್ಮೆ | 4560 | 1552 | 3008 |
| 37 | ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 6838 | 2574 | 4264 |
| 38 | ಸಣ್ಣ ಕೈಗಾರಿಕೆ | 563 | 201 | 362 |
| 39 | ಪ್ರವಾಸೋದ್ಯಮ | 583 | 158 | 425 |
| 40 | ಸಾರಿಗೆ | 2826 | 1159 | 1667 |
| 41 | ನಗರಾಭಿವೃದ್ಧಿ | 1447 | 559 | 888 |
| 42 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 6999 | 3567 | 3432 |
| 43 | ಯುವಜನ ಸೇವೆಗಳು | 326 | 120 | 206 |
| | ಒಟ್ಟು | **772025** | **516105** | **255920** |

**ಟಿಪ್ಪಣಿ: ಮಂಜೂರಾಗಿ ಖಾಲಿ ಇರುವ ಹುದ್ದೆಗಳ ಪೈಕಿ, ಗ್ರೂಪ್-ಸಿ ಮತ್ತು ಡಿ ವೃಂದಗಳಲ್ಲಿ ಅಂದಾಜು 75474 ಹುದ್ದೆಗಳನ್ನು (ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ವಾಹನ ಚಾಲಕರು ಮತ್ತು ಗ್ರೂಪ್-ಡಿ) ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿದೆ.**

ಮಹೇಶ್ ಆರ್
ಸರ್ಕಾರದ ಅಧೀನ ಕಾರ್ಯದರ್ಶಿ
ಕರ್ನಾಟಕ ಸರ್ಕಾರದ ಸಚಿವಾಲಯ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ
ಇಲಾಖೆ (ರಾಜಕೀಯ)